ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 16ನೇ ಮಾರ್ಚ್, 2020

ರಾಜ್ಯದಲ್ಲಿ ಎಂಡೋಸಲ್ಫನ್‌ನಿಂದ ಪೀಡಿತರಾಗಿ ಮೃತಪಟ್ಟವರ ಬಗ್ಗೆ

ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿರುವವರು):-

1009 (1205) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಇದುವರೆಗೂ ಎಂಡೋಸಲ್ಫನ್‌ನಿಂದ ಪೀಡಿತರಾಗಿ ಎಷ್ಟು ಜನ ಮೃತಪಟ್ಟಿದ್ದಾರೆ; (ಮಹಿಳೆ, ಮಕ್ಕಳು ಮತ್ತು ಪುರುಷರ ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರ ನೀಡುವುದು)

(ಆ) ಮೃತರ ಕುಟುಂಬಗಳಿಗೆ ಸರ್ಕಾರ ಇದುವರೆಗೂ ನೀಡಿರುವ ಪರಿಹಾರವೇನು;

(ಇ) ಎಂಡೋಸಲ್ಫನ್ ಪೀಡಿತರ ಮರು ವಸತಿಗೆ (Rehabitation) ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಾಗಿದ್ದಲ್ಲಿ, ಇದುವರೆಗೂ ಆಗಿರುವ ಪ್ರಗತಿ ಏನು;

(ಈ) ರಾಜ್ಯದಲ್ಲಿ ಎಂಡೋಸಲ್ಫನ್‌ನಿಂದ ತೊಂದರೆಗೊಳಗಾದ ಪ್ರದೇಶಗಳೆಷ್ಟು; ಅವು ಯಾವುವು?